# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಕನಾಟಕ ವಿಕಾಸ ಮಾಸ ಪತ್ರಿಕೆಯನ್ನು 2019-20 ಮತ್ತು 2020-21ನೇ ಸಾಲಿಗೆ ಮುದ್ರಿಸಿ ಸರಬರಾಜು ಮಾಡುವ ಬಗ್ಗೆ.

ಓದಲಾದ: ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 08 ಕವಿ 2017 ದಿನಾಂಕ:12.06.2017 & 13.11.2017

* * * *

ಪ್ರಸ್ತಾವನೆ:

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಮುದ್ರಿಸಿ ರಾಜ್ಯದ ಮೂರು ಸ್ಥರದ ಪಂಚಾಯತಿಗಳು, ಎಲ್ಲಾ ಜಿಲ್ಲಾಧಿಕಾರಿಗಳು, ಪಂ.ರಾಜ್ ಇಲಾಖೆಯ ಅಧೀನ ಸಂಸ್ಥೆಗಳಿಗೆ, ಸರ್ಕಾರದ ಪ್ರಮುಖ ಇಲಾಖೆಗಳ ಮುಖ್ಯಸ್ಥರಿಗೆ ಮತ್ತು ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ತಲಾ ಒಂದು ಪ್ರತಿಯಂತೆ ರಾಜ್ಯದ ಲೋಕಸಭಾ ಸದಸ್ಯರು, ರಾಜ್ಯ ಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಗೌರವ ಪ್ರತಿಗಳನ್ನು ಮುದ್ರಿಸಿ ಚಂದಾದಾರರಿಗೆ 2017-18 ಹಾಗೂ 2018-19ನೇ ಸಾಲಿನಲ್ಲಿ ವಿತರಿಸಲು ಮೆ॥ಕಾವೇರಿ ಪ್ರಿಂಟ್ಸ್ ಇಂಡಿಯಾ, ನಂ.79, 9ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಟಿ.ಆರ್.ಮಿಲ್ ಕಾಂಪೌಂಡ್, ಚಾಮರಾಜಪೇಟೆ, ಬೆಂಗಳೂರು 560018 ಇವರಿಗೆ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಪತ್ರಿಕೆಯ ಅಳತೆ 1/4 Demi ರಂತೆ ಒಳಪುಟಗಳನ್ನು 60 ಜಿಎಸ್‌ಎಂ ಮೆಕಾನಿಕಲ್ ಗ್ಲೇಸ್ಡ್ ಪೇಪರ್ ಮತ್ತು ರಕ್ಷಾ ಪುಟವನ್ನು 130 ಜಿಎಸ್‌ಎಂ ಇಂಡಿಯನ್ ಆರ್ಟ್ ಪೇಪರ್ ಲ್ಯಾಮಿನೇಷನ್‌ನೊಂದಿಗೆ ಮುದ್ರಿಸಿ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ.

ಸದರಿ ಕಾರ್ಯಾದೇಶದ ಅವದಿಯು ಮಾರ್ಚ್ 2019 ಕ್ಕೆ ಮುಕ್ತಾಯಗೊಂಡಿರುವುದರಿಂದ ಅದೇ ಮಾದರಿಯಲ್ಲಿ ಮುಂದಿನ 2 ವರ್ಷಗಳಲ್ಲಿ ಅಂದರೆ 2019-20 ಮತ್ತು 2020-21ನೇ ಸಾಲಿನಲ್ಲಿ (ಮಾರ್ಚ್ 2021ರ ವರೆಗೆ) ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಕರೆಯಬೇಕಾಗಿದೆ. ಟೆಂಡರ್ ಕರೆಯುವ ಉದ್ದೇಶಕ್ಕಾಗಿ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವನ್ನು ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಪ್ರಧಾನ ಸಂಪಾದಕರಾದ ನಿರ್ದೇಶಕರು (ಸುಗ್ರಾಯೋ) ಇವರನ್ನು ಟೆಂಡರ್ ಕರೆಯುವ ಅಧಿಕಾರಿ ಎಂದು ನೇಮಿಸಲು ಉದ್ದೇಶಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 62 ಕವಿ 2018 ದಿನಾಂಕ:14.05.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಮುಂದಿನ 2 ವರ್ಷಗಳಲ್ಲಿ ಅಂದರೆ 2019-20 ಮತ್ತು 2020-21ನೇ ಸಾಲಿನಲ್ಲಿ (ಮಾರ್ಚ್ 2021ರ ವರೆಗೆ) ಪತ್ರಿಕೆಯ ಅಳತೆ 1/4 Demi ರಂತೆ ಒಳಪುಟಗಳನ್ನು 60 ಜಿಎಸ್‌ಎಂ ಮೆಕಾನಿಕಲ್ ಗ್ಲೇಸ್ಡ್ ಪೇಪರ್ ಮತ್ತು ರಕ್ಷಾಪುಟವನ್ನು 130 ಜಿಎಸ್‌ಎಂ ಇಂಡಿಯನ್ ಆರ್ಟ್ ಪೇಪರ್ ಲ್ಯಾಮಿನೇಷನ್‌ನೊಂದಿಗೆ ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಕರೆಯುವ ಉದ್ದೇಶಕ್ಕಾಗಿ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವನ್ನು ಕೆ.ಟಿ.ಪಿ.ಪಿ ಅಧಿನಿಯಮದ ಪ್ರಕರಣ 9ರನ್ವಯ ಈ ಕೆಳಕಂಡ ಅಧಿಕಾರಿಯವರನ್ನು ನೇಮಿಸಲಾಗಿದೆ.

| ಕ್ರ.ಸಂ | ಅಧಿಕಾರಿಯ ಪದನಾಮ | ಸ್ಥಾನಮಾನ |
|---|---|---|
| 1. | ನಿರ್ದೇಶಕರು (ಗ್ರಾಮೂಸೌ) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಅ ಮತ್ತು ಪಂ.ರಾಜ್ ಇಲಾಖೆ. | ಇ-ಟೆಂಡರ್ ಆಹ್ವಾನಿಸುವ ಪ್ರಾಧಿಕಾರ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 14/05/2019
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮಹಾಲೇಖಾಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

3. ಸಂಬಂಧಿಸಿದ ಅಧಿಕಾರಿಗಳಿಗೆ.

ಪ್ರತಿಗಳನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಇ-ಆಡಳಿತ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಡಳಿತ ಸುಧಾರಣೆ), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅ ಮತ್ತು ಪಂ.ರಾಜ್ ಇಲಾಖೆ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಮತ್ತು ಪಂ.ರಾಜ್ ಇಲಾಖೆ.
9. ಆಯುಕ್ತರು, ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ, ಕಾವೇರಿ ಭವನ, ಬೆಂಗಳೂರು
10. ಅಪರ ಕಾರ್ಯದರ್ಶಿ/ಉಪ ಕಾರ್ಯದರ್ಶಿ (ಆಡಳಿತ), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ.
11. ನಿರ್ದೇಶಕರು(ಪಂ.ರಾಜ್), ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ.
12. ನಿರ್ದೇಶಕರು (ಗ್ರಾಮೂಸೌ), ಗ್ರಾಅ ಮತ್ತು ಪಂ.ರಾಜ್ ಇಲಾಖೆ.
13. ಅಪರ ನಿರ್ದೇಶಕರು, ಸ್ವಚ್ಛ ಭಾರತ ಮಿಷನ್, ಕಾವೇರಿ ಭವನ, ಬೆಂಗಳೂರು.
14. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅ ಮತ್ತು ಪಂ.ರಾಜ್ ಇಲಾಖೆ.
15. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅ ಮತ್ತು ಪಂ.ರಾಜ್ ಇಲಾಖೆ.
16. ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಅ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
17. ಹೆಚ್ಚುವರಿ ಪ್ರತಿ.